7

# ಅದ್ಭುತ ಕಾರ್ಯಗಳು ಹಾಗೂ ಪರಿಶುದ್ಧಾತ್ಮನು

*"ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷಮಾಡಿದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳಿದವರು ಇದನ್ನು ನಮಗೆ ಸ್ಥಿರಪಡಿಸಿದರು; ಮತ್ತು ದೇವರು ಅವರ ಕೈಯಿಂದ ಸೂಚಕ ಕಾರ್ಯಗಳನ್ನೂ ಅದ್ಭುತ ಕಾರ್ಯಗಳನ್ನೂ ನಾನಾ ವಿಧವಾದ ಮಹತ್ಕಾರ್ಯಗಳನ್ನೂ ನಡಿಸಿ ಪರಿಶುದ್ಧಾತ್ಮ ವರಗಳನ್ನು ತನ್ನ ಚಿತ್ತಾನುಸಾರವಾಗಿ ಅವರಿಗೆ ಅನುಗ್ರಹಿಸಿ ಅವರ ಮಾತಿಗೆ ಸಾಕ್ಷಿಕೊಡುತ್ತಿದ್ದನು" (ಇಬ್ರಿಯ 2:3, 4).*

ಅದ್ಭುತ ಕಾರ್ಯಗಳು ಪರಿಶುದ್ಧಾತ್ಮನ ಕಾರ್ಯದ ಮಹತ್ವದ ಭಾಗವಾಗಿದೆ. ತಂದೆಯು ಪರಿಶುದ್ಧಾತ್ಮನನ್ನು ತನ್ನ ಅದ್ಭುತಗಳನ್ನು ಮಾಡಲಿಕ್ಕೆ ಕಾರ್ಯಭಾರಿಯಂತೆ ಉಪಯೋಗಿಸಿದನೆಂದು ಪರಿಶುದ್ಧ ಬರಹಗಳು ಸೂಚಿಸುತ್ತವೆ (ಇಬ್ರಿಯ 2:3, 4). ಆತ್ಮನ ಅದ್ಭುತಕರವಾದ ಚಟುವಟಿಕೆಗಳ ಮುಖಾಂತರ, ಮಾತಾಡುತ್ತಿರುವ ಜನರು ತನ್ನ ಜನರು ಎಂದು ದೇವರು ಸಾಕ್ಷಿಕೊಟ್ಟನು (ಮಾರ್ಕ 16:20). ಹೀಗೆ, ಆತ್ಮನ ಮುಖಾಂತರ, ಆತನು ತನ್ನ ವಾಕ್ಯವನ್ನು ಕೊಟ್ಟನು, ದೃಢಪಡಿಸಿದನು ಮತ್ತು ಕಾಪಾಡಿದನು.

## ಅದ್ಭುತ ಕಾರ್ಯಗಳು ಪುನರಾವರ್ತಿಸಲ್ಪಡುವದಿಲ್ಲ

ದೇವರು ಒಂದು ಅದ್ಭುತ ಕಾರ್ಯದ ಮುಖಾಂತರ ಸಿದ್ಧಪಡಿಸಿ ತೋರಿಸಿದ್ದನ್ನು, ಅದ್ಭುತ ಕಾರ್ಯವನ್ನು ಪುನಃ ಮಾಡುವದರಿಂದ ರುಜುವಾತು ಮಾಡುವ ಅಗತ್ಯತೆಯಿಲ್ಲ, ಸೃಷ್ಟಿಯ ಮುಖಾಂತರ ದೇವರು ಒಂದೇ ಸಲ, ಎಲ್ಲಾ ಸಮಯಗಳಿಗಾಗಿ ತನ್ನ ಅಸ್ತಿತ್ವದ ಮತ್ತು ಸ್ವಭಾವದ ಪುರಾವೆಯನ್ನು ಪ್ರಕಟಿಸಿದನು (ರೋಮಾಪುರ 1:20). ನಕ್ಷತ್ರಗಳ ವಿಶಾಲ ಆಕಾಶದಲ್ಲಿ ದೇವರು ತನ್ನ ಬಲದ ಪ್ರಭಾವವನ್ನು ಪ್ರದರ್ಶಿಸಿದನು (ಕೀರ್ತನೆ 19:1) ಮತ್ತು ನಮ್ಮ ಗ್ರಹದ ಮೇಲೆ ಜೀವಿಗಳ ಅಸಂಖ್ಯಾತ ರೂಪಗಳಲ್ಲಿ ತನ್ನ ಸೃಷ್ಟಿಸಿದ ಆಸಕ್ತಿಯ ಘನತೆಯನ್ನು ತೋರಿಸಿದನು. ಸೃಷ್ಟಿಯ ದಿನಗಳಿಂದ, ದೇವರ ಬಲವನ್ನೂ ಸ್ವಭಾವವನ್ನೂ ಸ್ಥಿರಪಡಿಸಿ ತೋರಿಸಲು ಅವಶ್ಯವಾದ ಎಲ್ಲವೂ ಆತನು ಸೃಷ್ಟಿಸಿದ್ದರಲ್ಲಿ ಒಳಗೊಂಡಿರುತ್ತದೆ.

ಮಾನವ ಚರಿತ್ರೆಯಲ್ಲಿ ಮೊದಲು ಬಹುದೇವ ಮಾತಾವಲಂಭಿ ಧರ್ಮಗಳು ಅನೇಕ ದೇವರುಗಳನ್ನು ರೂಪಿಸಿ ಕೊಂಡವು, ಒಬ್ಬನೇ ದೇವರು ಇರುವನೋ ಮತ್ತು ಆ ಒಬ್ಬನೇ

ದೇವರು ಯಾರು ಎಂಬುದಕ್ಕೆ ರುಜುವಾತು ಇರುವುದೋ ಎಂಬುದರ ಅಗತ್ಯತೆಯನ್ನು ಅದು ಹುಟ್ಟಿಸಿತು. ಸುಳ್ಳು ದೇವರುಗಳಿಂದ ತುಂಬಿದ ದೇಶವಾಗಿದ್ದ ಐಗುಪ್ತದಲ್ಲಿ ತನ್ನನ್ನು ಸಿದ್ಧಪಡಿಸಿ ತೋರಿಸಲು ದೇವರು ಆಯ್ದುಕೊಂಡನು. ಹಲವಾರು ದೇವತೆಗಳಿಂದ ತುಂಬಿಕೊಂಡಿದ್ದ ವಾತಾವರಣದಲ್ಲಿ ಐಗುಪ್ತದ ಫರೋಹನು, "ಯೆಹೋವನೆಂಬವನು ಯಾರು? ನಾನು ಅವನ ಮಾತನ್ನು ಕೇಳಿ ಇಸ್ರಾಯೇಲ್ಯಯರನ್ನು ಹೋಗಗೊಡಿಸುವ ದೇಕೆ?" (ವಿಮೋಚನಕಾಂಡ 5:2) ಎಂದು ಕೇಳಿದನು. ಇದಕ್ಕೆ ಉತ್ತರವಾಗಿ, ದೇವರು ಅದ್ಭುತಕರವಾದ ಕಾರ್ಯಗಳ ಮುಖಾಂತರ ಐಗುಪ್ತ್ಯದ ದೇವರಗಳ ಮೇಲೆ ತನ್ನ ಪ್ರಭಾವವನ್ನೂ ಬಲವನ್ನೂ ಪ್ರಕಟಿಸಿದನು. ತಾನೊಬ್ಬನೇ ದೇವರು ಎಂಬುದನ್ನು ಪ್ರದರ್ಶಿಸಿದನು. "...ಐಗುಪ್ತ ದೇಶದ ಸಮಸ್ತ ದೇವತೆಗಳಿಗೂ ಶಿಕ್ಷೆ ಮಾಡುವೆನು; ನಾನು ಯೆಹೋವನು" (ವಿಮೋಚನಕಾಂಡ 12:12) ಎಂದು ಆತನು ಹೇಳಿದನು. ಇಸ್ರಾಯೇಲ್ಯರನ್ನು ಐಗುಪ್ತ್ಯದ ಗುಲಾಮಗಿರಿಯಿಂದ ವಿಮೋಚಿಸುವದರಲ್ಲಿ ದೇವರ ಅದ್ಭುತ ಕಾರ್ಯಗಳನ್ನು ಕುರಿತು ಮೋಶೆಯ ಮಾವ ಇತ್ರೋವನು ಸರಿಯಾದ ತೀರ್ಮಾನ ಮಾಡಿದನು. "... ಆ ಐಗುಪ್ತ್ಯರು ಯಾವ ವಿಷಯದಲ್ಲಿ ಗರ್ವಪಡುತ್ತಿದ್ದರೋ ಆ ವಿಷಯದಲ್ಲಿ ಅವರನ್ನು ತಗ್ಗಿಸಿದ್ದರಿಂದ ಯೆಹೋವನೇ ಎಲ್ಲಾ ದೇವರುಗಳಿಗಿಂತಲೂ ದೊಡ್ಡವನೆಂದು ತಿಳಿದುಕೊಂಡಿದ್ದೇನೆ ಅಂದನು" (ವಿಮೋಚನಕಾಂಡ 18:11).

ಆತನು ತಾನೊಬ್ಬನೇ ದೇವರಾಗಿದ್ದೇನೆ ಎಂಬುದನ್ನು ಒಂದರನಂತರ ಒಂದು ಬರುವ ಪ್ರತಿಯೊಂದು ಸಂತತಿಗೆ ಸಿದ್ಧಪಡಿಸಿ ತೋರಿಸುವ ಅಗತ್ಯತೆಯಿರಲಿಲ್ಲ. ತಾನು ಐಗುಪ್ತದಲ್ಲಿ ಅದ್ಭುತಗಳನ್ನು ಮಾಡುವೆನೆಂದು ಮೋಶೆಗೆ ಹೇಳಿದನು, "ಇಸ್ರಾಯೇಲ್ಯರು ತಮ್ಮ ಮಕ್ಕಳಿಗೂ ಮೊಮ್ಮಕ್ಕಳಿಗೂ ನಾನು ಐಗುಪ್ತ್ಯರ ನಡುವೆ ನಡಿಸಿರುವ ಮಹತ್ಕಾರ್ಯ ಗಳನ್ನು ವಿವರಿಸಿ - ಯೆಹೋವನು ಐಗುಪ್ತ್ಯರನ್ನು ತನ್ನ ಇಷ್ಟ ಬಂದಂತೆ ಆಡಿಸಿ ಶಿಕ್ಷಿಸಿದನು ಎಂಬುದಾಗಿ ತಿಳಿಸುವದಕ್ಕೂ ನಾನು ಫರೋಹನ ಹೃದಯವನ್ನೂ ಅವನ ಪರಿವಾರದವರ ಹೃದಯಗಳನ್ನೂ ಮೊಂಡು ಮಾಡಿದ್ದೇನೆ. ಇದಲ್ಲದೆ ಈ ಮಹತ್ಕಾರ್ಯಗಳಿಂದ ನೀವು ನನನ್ನೇ ಯೆಹೋವನೆಂದು ತಿಳಿದುಕೊಳ್ಳುವಿರಿ" (ವಿಮೋಚನಕಾಂಡ 10:2). ಐಗುಪ್ತ್ಯರ ದೇವರುಗಳ ಮೇಲೆ ತನಗೆ ಬಲವಿದೆಯೆಂಬುದನ್ನು ಇಸ್ರಾಯೇಲ್ಯರ ಮಕ್ಕಳಿಗೆ ಮತ್ತು ಮೊಮ್ಮಕ್ಕಳಿಗೆ ತೋರಿಸಲು ದೇವರು ಐಗುಪ್ತದಲ್ಲಿ ಮಾಡಿದ ಅದ್ಭುತ ಕಾರ್ಯಗ ಳನ್ನು ಪುನಃ ಮಾಡುವದಿಲ್ಲ. ಈ ಸಂಕೇತಗಳನ್ನು ನೋಡಿದವರು ತಮ್ಮ ಮುಂದಿನ ಸಂತತಿಗಳಿಗೆ, ಅವರು ದೇವರನ್ನು ಒಬ್ಬನೇ ಮತ್ತು ಕೇವಲ ಒಬ್ಬನೇ ನಿಜವಾದ ದೇವರಂತೆ ಸ್ವೀಕರಿಸಲಿಕ್ಕಾಗುವಂತೆ ಹೇಳಬೇಕಾಗಿತ್ತು.

ವರ್ಷಗಳ ನಂತರ, ಗಿದ್ಯೋನನು ಕೇಳಿದನು, "... ಸ್ವಾಮೀ, ಯೆಹೋವನು ನಮ್ಮ ಸಂಗಡ ಇದ್ದರೆ ನಮಗೆ ಇದೆಲ್ಲಾ ಯಾಕೆ ಸಂಭವಿಸಿತು? ನಮ್ಮ ಹಿರಿಯರು ಯೆಹೋವನು ಅದ್ಭುತಗಳನ್ನು ನಡಿಸಿ 'ತಮ್ಮನ್ನು ಐಗುಪ್ತ್ಯದಿಂದ ಬಿಡಿಸಿದನೆಂಬುದಾಗಿ ವಿವರಿಸುತ್ತಿದ್ದರು. ಅಂಥ ಅದ್ಭುತಗಳು ಈಗೆಲ್ಲಿವೇ? ...' " (ನ್ಯಾಯಸ್ಥಾಪಕರು 6:13). (1) ಇಸ್ರಾಯೇಲ್ಯರನ್ನು ಐಗುಪ್ತದಿಂದ ವಿಮೋಚಿಸಿದಂಥ ಅದ್ಭುತಕಾರ್ಯಗಳು ಇನ್ನು ಮುಂದೆ ಮಾಡಲ್ಪಡುವದಿಲ್ಲ ಹಾಗೂ (2) ಆ ಅದ್ಭುತಕಾರ್ಯಗಳ ಬಗ್ಗೆ ಆನಂತರ ಸಂತತಿಯವರಿಗೆ ಹೇಳಲ್ಪಟ್ಟಿತು ಎಂಬುದು ಅವನ ಪ್ರಶ್ನೆಯಿಂದ ಸ್ಪಷ್ಟವಾಗುತ್ತದೆ.

ಹಾಗೆಯೇ, ಯೇಸುವು ಸೂಚಕ ಕಾರ್ಯಗಳನ್ನು ಮಾಡಿದ್ದನ್ನು ನೋಡಿದವರು ಮುಂದಿನ ಸಂತತಿಯವರು ನಂಬಲಿಕ್ಕಾಗುವಂತೆ ಅವುಗಳನ್ನು ದಾಖಲೆ ಮಾಡಿದರು (ಯೋಹಾನ 20:30, 31). ಆತನ ಜೀವನ, ಅದ್ಭುತಕಾರ್ಯಗಳು, ಮರಣ ಮತ್ತು ಪುನರುತ್ಥಾನವನ್ನು ಲಿಖಿತ ವಾಕ್ಯದ ಮುಖಾಂತರ ಕಲಿತುಕೊಳ್ಳುತ್ತೇವೆ. ಘಟನೆಗಳು

ಪುನಃ ಸಂಭವಿಸುವದಿಲ್ಲ.

## ಅದ್ಭುತಕಾರ್ಯಗಳಿಗೆ ಒಂದು ನಿರ್ದಿಷ್ಟವಾದ ಉದ್ದೇಶವಿತ್ತು

ಯೇಸುವು ಕೆಲವು ಸಲ ಜನರ ಮೇಲಿನ ಕರುಣೆಯಿಂದ ಅದ್ಭುತಕಾರ್ಯಗಳನ್ನು ಮಾಡಿದನು (ಮತ್ತಾಯ 9:36; 14:14; 15:32; 20:34). ಹಾಗಿದ್ದರೂ, ಸೃಷ್ಟಿಕಾರ್ಯದೊಂದಿಗೆ ಪ್ರಾರಂಭಿಸಿ ಪ್ರತಿಯೊಂದು ಅದ್ಭುತಕಾರ್ಯಕ್ಕೆ ಅದರ ಹಿಂದೆ ಒಂದೇ ಪ್ರಮುಖ ಉದ್ದೇಶವಿತ್ತು.

1. ಸೃಷ್ಟಿಯ ಭವ್ಯತೆಯ ಉದ್ದೇಶವು ದೇವರ ಅಸ್ತಿತ್ವವನ್ನು ದೃಢಪಡಿಸಿ ತೋರಿಸುವುದಾಗಿತ್ತು (ರೋಮಾಪುರ 1:20).

2. ಅದ್ಭುತ ಕಾರ್ಯಗಳ ಮುಖಾಂತರ, ದೇವರು ತನ್ನನ್ನು ಒಬ್ಬನೇ ನಿಜವಾದ ದೇವರೆಂದು - ಐಗುಪ್ತ್ಯರ ದೇವರುಗಳ ಮೇಲಿರುವ ದೇವರು (ವಿಮೋಚನಕಾಂಡ 10:2) ಮತ್ತು ಕಾನಾನ್ಯರ ದೇವರುಗಳ ಮೇಲಿರುವ ದೇವರು (1 ಅರಸು 18:36-39) ಎಂದು ತೋರಿಸಿದನು.

3. ದೇವರು ಯೇಸುವನ್ನು ತನ್ನ ಕುಮಾರನೆಂದು ಅದ್ಭುತಕಾರ್ಯಗಳ, ಆಶ್ಚರ್ಯಕಾರ್ಯಗಳ ಮತ್ತು ಸೂಚಕ ಕಾರ್ಯಗಳ ಮೂಲಕ ಸಿದ್ಧಪಡಿಸಿ ತೋರಿಸಿದನು (ಯೋಹಾನ 20:30, 31; ಅಪೊಸ್ತಲರ ಕೃತ್ಯಗಳು 2:22).

4. ದೇವರು ಕೆಲವು ಜನರನ್ನು (ಅಪೊಸ್ತಲರನ್ನು) ತನ್ನ ಒಪ್ಪಿಗೆಯುಳ್ಳ ಮಧ್ಯಸ್ಥಗಾರರಂತೆ, "ಸೂಚಕ ಕಾರ್ಯಗಳನ್ನೂ ಅದ್ಭುತಗಳನ್ನೂ ಮಹತ್ಕಾರ್ಯಗಳನ್ನೂ ಮಾಡುವದರಿಂದ" ಗುರುತಿಸಿದನು (2 ಕೊರಿಂಥ 12:12).

5. ದೇವರು ತನ್ನ ವಾಕ್ಯವನ್ನು ಆಯ್ದುಕೊಂಡ ಜನರಿಗೆ ಪರಿಶುದ್ಧಾತ್ಮನ ಮುಖಾಂತರ ಪ್ರಕಟಿಸಲಿಕ್ಕೆ ತನ್ನ ದೈವಿಕ ಬಲವನ್ನು ಉಪಯೋಗಿಸಿದನು (ಎಫೆಸ 3:3-5; 2 ತಿಮೊಥೆ 3:16; 1 ಪೇತ್ರ 1:10-12; 2 ಪೇತ್ರ 1:20, 21).

6. ದೇವರ ಮಧ್ಯಸ್ಥಗಾರರಿಗೆ ವಾಕ್ಯವು ಅದ್ಭುತಕರವಾಗಿ ಕೊಡಲ್ಪಟ್ಟಿತಲ್ಲದೆ, ಅದು ಅದ್ಭುತಕಾರ್ಯಗಳ, ಮಹತ್ಕಾರ್ಯಗಳ ಹಾಗೂ ಸೂಚಕ ಕಾರ್ಯಗಳ ಮುಖಾಂತರ ದೃಢಪಡಿಸಲ್ಪಟ್ಟಿತು (ಮಾರ್ಕ 16:20; ಅಪೊಸ್ತಲರ ಕೃತ್ಯಗಳು 14:13; ಇಬ್ರಿಯ 2:2-4).

7. ದೇವರು ತನ್ನ ಚಿತ್ತವನ್ನು ಅದ್ಭುತಕರವಾದ ಸಂಕೇತಗಳಿಂದ ದೃಢಪಡಿಸಿದನು. ಉದಾಹರಣೆಯಾಗಿ, ಅನ್ಯಜನರಿಗೆ ರಕ್ಷಣೆಯ ಬಾಗಿಲನ್ನು ತಾನು ತೆರೆಯುತ್ತಿರುವದನ್ನು ದೃಢಪಡಿಸಲು ಆತನು ಒಂದು ಸಂಕೇತವನ್ನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 10:47; 11:17; 15:7-9). ಸೂಚಕ ಕಾರ್ಯಗಳು ಸಮಾರ್ಯದವರ ಮಾರ್ಪಟಿಸುವಿಕೆಯನ್ನೂ ತೋರಿಸಿದವು (ಅಪೊಸ್ತಲರ ಕೃತ್ಯಗಳು 8:14-19) - ಅವರು ಸಾಮಾನ್ಯವಾಗಿ ಯೆಹೂದ್ಯರಿಂದ ಸ್ವೀಕರಿಸಲ್ಪಡದ ಜನಾಂಗವಾಗಿದ್ದರು (ಯೋಹಾನ 4:9) - ಮತ್ತು ಯೋಹಾನನಿಂದ ಮಾರ್ಪಾಟು ಹೊಂದಿದವರ ಪುನಃ ಬಾಪ್ತಿಸ್ಮವನ್ನು ಒಪ್ಪುತ್ತಿರಲಿಲ್ಲ (ಅಪೊಸ್ತಲರ ಕೃತ್ಯಗಳು 19:1-6).

## ಸುಳ್ಳು ಸೂಚಕ ಕಾರ್ಯಗಳು ಮಾಡಲ್ಪಟ್ಟವು

ಸುಳ್ಳು ಬೋಧಕರು ನಂಬಿಕೆ ಹುಟ್ಟಿಸುವಂಥ ಸೂಚಕ ಕಾರ್ಯಗಳನ್ನೂ

ಮಹತ್ಕಾರ್ಯಗಳನ್ನೂ ಮಾಡಬಹುದು. ಮೋಶೆ (ಧರ್ಮೋಪದೇಶಕಾಂಡ 13:1-3), ಯೇಸು (ಮತ್ತಾಯ 24:24), ಪೌಲ (2 ಕೊರಿಂಥ 11:13-15; 2 ಥೆಸಲೊನೀಕ 2:8-10) ಮತ್ತು ಯೋಹಾನ (ಪ್ರಕಟನೆ 13:13, 14; 16:14) ಇವರೆಲ್ಲರು ಈ ಸತ್ಯವನ್ನು ಬೋಧಿಸಿದರು.

ದೇವರ ನಿಜವಾದ ಬೋಧಕರು ಹೌದೋ, ಅಲ್ಲವೋ ಎಂಬುದನ್ನು ತೀರ್ಮಾನಿಸಲು ಬೋಧಕರು ಹೇಳುವಂಥದ್ದನ್ನು ನಾವು ಪರೀಕ್ಷಿಸತಕ್ಕದ್ದು. ಪ್ರವಾದಿಯ ಫಲ (ಮತ್ತಾಯ 7:15-20) ಅವನ ಬೋಧನೆಯು ನಿಜವಾದ ಪ್ರವಾದಿಯ ಮತ್ತು ಸುಳ್ಳು ಪ್ರವಾದಿಯ ಮಧ್ಯದಲ್ಲಿಯ ಭಿನ್ನತೆ ಮಾಡುವಂಥದ್ದರ ತಳಹದಿಯಾಗಿದೆ. ದೇವರು ತನ್ನ ಜನರಿಗೆ ನಿರ್ದೇಶಿಸಿದನು:

> ಯಾವ ಪ್ರವಾದಿಯಾಗಲಿ, ಕನಸುಕಂಡವನಾಗಲಿ ನಿಮ್ಮ ಮಧ್ಯದಲ್ಲಿ ಬಂದು ನಿಮಗೆ ಗೊತ್ತಿಲ್ಲದ ಇತರ ದೇವರುಗಳನ್ನು ಸೂಚನೆ ಮಾಡಿ, "ಈ ದೇವತೆಗಳನ್ನು ಅವಲಂಬಿಸಿ ಸೇವಿಸೋಣ" ಎಂದು ಬೋಧಿಸುತ್ತಾ ಆ ಬೋಧನೆಯನ್ನು ಸ್ಥಾಪಿಸುವದಕ್ಕೆ ಒಂದು ಅದ್ಭುತವನ್ನಾಗಲಿ ಮಹತ್ಕಾರ್ಯವನ್ನಾಗಲಿ ತೋರಿಸಿ ಕೊಡುತ್ತೇನೆಂದು ಹೇಳಲು ಅವನು ಹೇಳಿದಂತೆಯೇ ನಡೆದರೂ ನೀವು ಅವನ ಮಾತಿಗೆ ಕಿವಿಗೊಡಬಾರದು. ನಿಮ್ಮ ದೇವರಾದ ಯೆಹೋವನು - ಇವರು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ತನ್ನನ್ನೆ ಪ್ರೀತಿಸುವವರು ಹೌದೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕೆ ನಿಮ್ಮನ್ನು ಪರೀಕ್ಷಿಸುತ್ತಾನೆ, ಆತನು ಹೇಳುವ ಮಾರ್ಗದಲ್ಲೇ ನೀವು ನಡೆದು ಆತನಲ್ಲಿಯೇ ಭಯ ಭಕ್ತಿಯುಳ್ಳವರಾಗಿ ಆತನ ಆಜ್ಞೆಗಳನ್ನೇ ಅನುಸರಿಸಿ ಆತನಿಗೇ ವಿಧೇಯರಾಗಿ ಆತನನ್ನೇ ಸೇವಿಸುತ್ತಾ ಹೊಂದಿಕೊಂಡಿರಬೇಕು. ಆ ಪ್ರವಾದಿಗೆ ಅಥವಾ ಆ ಕನಸುಕಂಡವನಿಗೆ ಮರಣ ಶಿಕ್ಷೆಯಾಗಬೇಕು, ... (ಧರ್ಮೋಪ ದೇಶಕಾಂಡ 13:1-5).

ದೇವರು ತನ್ನ ಜನರು ಒಬ್ಬ ಬೋಧಕನು ಅವನು ಹೇಳುವದರಿಂದ ಪರೀಕ್ಷಿಸಬೇಕೆಂದು ಬಯಸುತ್ತಾನೆ (1 ಯೋಹಾನ 4: 1, 6). ದೇವರ ಪ್ರಕಟಿತ ಸತ್ಯವನ್ನು ಬೈಬಲಿನಲ್ಲಿ ಕಂಡುಕೊಂಡಂತೆ ಬೋಧಿಸದವನು, ಅವನು ಸೂಚಕ ಕಾರ್ಯಗಳನ್ನು ಮಹತ್ಕಾರ್ಯಗಳನ್ನು ಮಾಡುವವರಾಗಿದ್ದರೂ, ಸುಳ್ಳು ಪ್ರವಾದಿಯಾಗಿದ್ದಾನೆ.

"ತಮ್ಮ ರಹಸ್ಯ ವಿದ್ಯೆಯಿಂದ" ತನ್ನ ಮಂತ್ರವಾದಿಗಳಿಂದ ಫರೋಹನು ತಪ್ಪು ದಾರಿಗೆಳೆಯಲ್ಪಟ್ಟನು. ಮೋಶೆಯ ಅದ್ಭುತಕಾರ್ಯಗಳಂಥ ಕಾರ್ಯಗಳನ್ನು ಅವರು ಮಾಡಿದರು. ಕೋಲನ್ನು ಹಾವುಗಳಾಗಿ ಮಾರ್ಪಡಿಸಿದರು (ವಿಮೋಚನಕಾಂಡ 7:11), ನೀರನ್ನು ರಕ್ತವಾಗಿ ಮಾರ್ಪಡಿಸಿದರು (ವಿಮೋಚನಕಾಂಡ 7:20, 22), ಮತ್ತು ಕಪ್ಪೆಗಳನ್ನು ಹುಟ್ಟುವಂತೆ ಮಾಡಿದರು (ವಿಮೋಚನಕಾಂಡ 8:6, 7). ಹೀಗಿದ್ದರೂ ಈ ಚಟುವಟಿಕೆಗಳು ಅದ್ಭುತಕರವಾಗಿ ತೋರಿದರೂ ಫರೋಹನ ಮಾಂತ್ರಿಕರು ದೇವರಿಂದ ಬಂದವರು ಎಂದು ಸಿದ್ಧಪಡಿಸಿ ತೋರಿಸಲಿಲ್ಲ. ಅದೇ ರೀತಿಯಲ್ಲಿ, ಇಂದಿನ ದಿನಗಳ ಅದ್ಭುತಕಾರ್ಯಗಳನ್ನು ಮಾಡುವವರಿಂದ ಸಾಧಿಸಲ್ಪಡುವ ಅಸಾಮಾನ್ಯವಾದ ಕಾರ್ಯಗಳು ದೇವರು ಅವರ ಮೂಲಕ ಕಾರ್ಯಮಾಡುವನೆಂದು ಸಿದ್ಧಪಡಿಸಿ ತೋರಿಸುವದಿಲ್ಲ.

ಅಂಥ ಮೋಸಕರವಾದ ಆಚರಣೆಗಳ ಮೂಲವನ್ನು ಕುರಿತು ನಮಗೆ ನಿಶ್ಚಿತತೆ ಇರಲಿಕ್ಕಿಲ್ಲ, ಅವು ಸೈತಾನನಿಂದ ಸುಳ್ಳು ಅದ್ಭುತ ಬಲದಿಂದ ಬಂದವುಗಳೋ (2 ಥೆಸಲೊನೀಕ 2:9),

ಸೈತಾನನಿಂದ ಪ್ರಚೋದಿಸಲ್ಪಟ್ಟ ಮನುಷ್ಯರ ಮೋಸವಾದ ಕಾರ್ಯಗಳೋ (2 ಕೊರಿಂಥ 11:13-15), ದೇವರಿಂದ ಬಿಡಲ್ಪಟ್ಟ ಭ್ರಮೆಗಳೋ (2 ಥೆಸಲೊನೀಕ 2:11, 12), ಇಲ್ಲವೇ, ದೆವ್ವಗಳು ಮಾಡುವ ಮಹತ್ಕಾರ್ಯಗಳೋ (ಪ್ರಕಟನೆ 16:14)? ಯೋಬನನ್ನು ಬಾಧಿಸಲು ದೇವರು ಸೈತಾನನ್ನು ಬಿಟ್ಟನೋ (ಯೋಬ 1:12; 2:6) ಹಾಗೂ ಯುವಕನು ಸರಪಣಿಗಳನ್ನೂ ಬೇಡಿಗಳನ್ನೂ ಮುರಿಯಲು ದೆವ್ವವು ಬಲದಿಂದ ತುಂಬಿಸಿತೋ (ಮಾರ್ಕ 5:2-4) ಎಂಬುದನ್ನು ನಾವು ಅರಿಯೆವು. ಹೀಗಿದ್ದರೂ, ದೇವರಿಂದ ಆದ ನಿಜವಾದ ಅದ್ಭುತ ಕಾರ್ಯಗಳಿಗೆ ಹೋಲಿಸುವಂಥ ಯಾವುದನ್ನಾಗಲೀ ಸಾಧಿಸಲು ಸೈತಾನನು ಎಂದೂ ಶಕ್ತನಾಗಿರುವುದಿಲ್ಲ. ಯೇಸುವಿನ ಸೇವೆಯ ಸಮಯದಲ್ಲಿಯ ಸೈತಾನನಿಂದ ಇಲ್ಲವೇ ದೆವ್ವಗಳಿಂದ ಅಸಾಮಾನ್ಯವಾದ ಬಲಗಳು ಇಂದು ಸೈತಾನನಿಗೂ ದೆವ್ವಗಳಿಗೂ ಅದ್ಭುತಕರವಾದ ಶಕ್ತಿಗಳು ಇರುವವೆಂದು ಸಿದ್ಧಪಡಿಸಿ ತೋರಿಸುವದಿಲ್ಲ. ಬೈಬಲನ್ನು ಬರೆದವರು ದೇವರಿಂದ ಬರೆದವರೆಂದೂ ಮತ್ತು ಅವರು ಬರೆದದ್ದರ ಮುಖಾಂತರ ಯಾರು ನಿಜವಾದ ಬೋಧಕ ಹಾಗೂ ಯಾರು ಸುಳ್ಳು ಬೋಧಕ ಎಂಬುದನ್ನು ನಿರ್ಣಯಿಸಬಹುದೆಂದೂ ನಾವು ನಿಶ್ಚಿತವಾಗಿ ತಿಳಿಯ ಬಹುದು (1 ಯೋಹಾನ 4:6).

## ಅದ್ಭುತ ಕಾರ್ಯಗಳಿಗೆ ದೈವಿಕ ಮೂಲವಿತ್ತು

ದೇವರ ಬಲದ ಮುಖಾಂತರವಾಗಿ ಅದ್ಭುತಕಾರ್ಯಗಳು ಮಾಡಲ್ಪಟ್ಟವು ಆದರೆ ಒಬ್ಬನು ವಿಶ್ವಾಸದ ಬಲದ ಮೇಲೆ ಮಾತ್ರವೇ ಮಾಡಲ್ಪಡಲಿಲ್ಲ - ಯೇಸುವು ತನ್ನನ್ನು ಬರಿದು ಮಾಡಿಕೊಂಡು (ಫಿಲಿಪ್ಪಿ 2:6, 7), ತಾನು ಅಭಿಷೇಕಿಸಲ್ಪಟ್ಟ ಪರಿಶುದ್ಧಾತ್ಮ ಬಲದಿಂದ ತನ್ನ ಅದ್ಭುತಕಾರ್ಯಗಳನ್ನು ಮಾಡಿದನು (ಮತ್ತಾಯ 12:28; ಲೂಕ 4:18; ಅಪೊಸ್ತಲರ ಕೃತ್ಯಗಳು 10:38). ಕೆಲವೊಂದು ಅದ್ಭುತಕರವಾದ ಬಲಗಳನ್ನು ಎಪ್ಪತ್ತು ಜನ ಶಿಷ್ಯರಿಗೆ ಕೊಟ್ಟನು (ಲೂಕ 10:9, 17), ಹಾಗೆಯೇ ತನ್ನ ವೈಯಕ್ತಿಕ ಸೇವೆಯ ಅವಧಿಯಲ್ಲಿ ಅಪೊಸ್ತಲರಿಗೆ (ಮತ್ತಾಯ 10:1), ಬಹುಶಃ ಅವರೊಂದಿಗಿದ್ದ ಪರಿಶುದ್ಧಾತ್ಮನ ಮುಖಾಂತರ ಕೊಟ್ಟನು (ಯೋಹಾನ 14:17). ಅನಂತರ, ಅವರು ಬಾಪ್ತಿಸ್ಮಹೊಂದಿ, ಪರಿಶುದ್ಧಾತ್ಮನಿಂದ ತುಂಬಿಸಲ್ಪಟ್ಟಾಗ (ಅಪೊಸ್ತಲರ ಕೃತ್ಯಗಳು 1:2-5; 2:4), ಅವರು ಇನ್ನೂ ಹೆಚ್ಚು ಬಲದೊಂದಿಗೆ ತುಂಬಿಸಲ್ಪಟ್ಟರು. ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನು ಬಂದನಂತರ ಕೆಲ ಸಮಯದ ವರೆಗೆ ಅಪೊಸ್ತಲರು ಮಾತ್ರವೇ ಅದ್ಭುತಕಾರ್ಯಗಳನ್ನು ಮಾಡುತ್ತಿದ್ದರೆಂಬುದು ಮಹತ್ವದ್ದಾಗಿ ತೋರುತ್ತದೆ (ಅಪೊಸ್ತಲರ ಕೃತ್ಯಗಳು 2:43; 4:33; 5:12). ಅವರ ಮೇಲೆ ಅಪೊಸ್ತಲರು ಹಸ್ತಗ ಳನ್ನಿಡುವವರೆಗೆ ಇತರರು ಅದ್ಭುತಕಾರ್ಯಗಳನ್ನು ಮಾಡಲು ಪ್ರಾರಂಭಿಸಲಿಲ್ಲ, ಇದು ಸ್ತೇಫನ ಮತ್ತು ಫಿಲಿಪ್ಪರ ಬಗ್ಗೆ ಸತ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 6:5, 6, 8; 8:6).

ಅವರ ಶಿಷ್ಯತ್ವದ ಮೊದಲಲ್ಲಿ - ಅಶುದ್ಧ ಆತ್ಮಗಳನ್ನು ಹೊರಗೆ ಹಾಕಲು ಅವರಿಗೆ ಬಲವು ಕೊಡಲ್ಪಟ್ಟಿದ್ದರೂ (ಮತ್ತಾಯ 10:1, 8; ಮಾರ್ಕ 3:14, 15) ಮತ್ತು ಅವರು ದೆವ್ವಗಳನ್ನು ಬಿಡಿಸಿದ್ದರೂ (ಮಾರ್ಕ 6:13) - ಅಪೊಸ್ತಲರು ದೆವ್ವಹಿಡಿದವನನ್ನು ಗುಣಪಡಿಸಲಿಕ್ಕಾಗಲಿಲ್ಲ. ಆದರೆ ಅವರಿಗೆ ನಂಬಿಕೆಯ ಕೊರತೆಯಾದದ್ದು ಕಾರಣ ವಾಗಿತ್ತು (ಮತ್ತಾಯ 17:20). ವಿಶ್ವಾಸದ ಕೊರತೆಯು ತಂದೆಯ ಇಲ್ಲವೇ ದೆವ್ವಹಿಡಿದ ಅವನ ಮಗನ ಪರವಾಗಿ ಇರಲಿಲ್ಲ, ಆದರೆ ಅಪೊಸ್ತಲರ ಪರವಾಗಿತ್ತು.

ಅದ್ಭುಕ ಕಾರ್ಯಗಳನ್ನು ಮಾಡಬೇಕಾದರೆ ಬಲವು ಮೊದಲಾಗಿ ಕೊಡಲ್ಪಡಬೇಕು, ಆಮೇಲೆ, ಕೊಡಲ್ಪಟ್ಟ ಬಲವನ್ನು ಉಪಯೋಗಿಸಲು ವಿಶ್ವಾಸವು ಅಗತ್ಯವಾಗಿದೆ, ನೀರಿನ ಮೇಲೆ ನಡೆಯಲು ಯೇಸು ಪೇತ್ರನಿಗೆ ಬಲಕೊಟ್ಟನು, ಆದರೆ ಪೇತ್ರನು ಸೋತು ಹೋದನು - ಅವನಿಗೆ ಬಲವು ಕೊಡದೇ ಇದ್ದದ್ದು ಕಾರಣವಲ್ಲ, ಆದರೆ ಅವನ ವಿಶ್ವಾಸವು ಸೋತು ಹೋದದ್ದರಿಂದ (ಮತ್ತಾಯ 14:28-31).

ಅದ್ಭುತ ಕಾರ್ಯಗಳು ದೇವರಿಂದ (1 ಕೊರಿಂಥ 12:4-6) ಪರಿಶುದ್ಧಾತ್ಮನ ಮೂಲಕ ಕೊಡಲ್ಪಟ್ಟವು. ಅವು ಮನುಷ್ಯನ ಚಿತ್ತದಿಂದ ಇಲ್ಲವೇ ಕೇವಲ ನಂಬಿಕೆಯಿಂದ ಹೊಂದಿಕೊಳ್ಳಲ್ಪಡಲಿಲ್ಲ, ಆದರೆ ಪರಿಶುದ್ಧಾತ್ಮನ ಕಾರ್ಯಾಚರಣೆಯ ಮೂಲಕ ಅವು ಮಾಡಲ್ಪಟ್ಟವು. "ಆ ವರಗಳನ್ನೆಲ್ಲಾ ಆ ಒಬ್ಬ ಆತ್ಮನೇ ತನ್ನ ಚಿತ್ತಕ್ಕೆ ಬಂದ ಹಾಗೆ ಒಬ್ಬೊಬ್ಬನಿಗೆ ಹಂಚಿಕೊಟ್ಟು ನಡಿಸುತ್ತಾನೆ" (1 ಕೊರಿಂಥ 12:11; ಇಬ್ರಿಯ 2:4) ಎಂದು ನಮಗೆ ಹೇಳಲ್ಪಟ್ಟಿದೆ. ಕ್ರೈಸ್ತನಿಗೆ ಕೊಡಲ್ಪಟ್ಟ ಅದ್ಭುತಕರವಾದ ವರವು ಪರಿಶುದ್ಧಾತ್ಮನ ಚಿತ್ತದ ಮೇಲೆ ಅವಲಂಭಿಸಿರುತ್ತವೆ, ಆದರೆ ವರವನ್ನು ಸ್ವೀಕರಿಸಿದ ವ್ಯಕ್ತಿಯ ಅಪೇಕ್ಷೆಯ ಮೇರೆಗೆ ಅಲ್ಲ.

ಅಪೊಸ್ತಲರು ತಮ್ಮ ಹಸ್ತಗಳನ್ನಿಡುವದರ ಮುಖಾಂತರ ಇತರರಿಗೆ ಪರಿಶುದ್ಧಾತ್ಮನನ್ನು ಕೊಡುವ ಮತ್ತು ಅವರ ಮೇಲೆ ಅದ್ಭುತಕರವಾದ ವರಗಳನ್ನು ಅನುಗ್ರಹಿಸುವ ಬಲವನ್ನು ಹೊಂದಿಕೊಂಡಿದ್ದರು (ಅಪೊಸ್ತಲರ ಕೃತ್ಯಗಳು 19:6; 2 ತಿಮೊಥೆ 1:6). ಪರಿಶುದ್ಧಾತ್ಮನನ್ನು ಕೊಡುವ ಅವರ ಸಾಮರ್ಥ್ಯವು ಅವರ ಅಪೊಸ್ತಲತ್ವದ ಸಂಕೇತಗಳಲ್ಲಿ ಒಂದಾಗಿತ್ತು (2 ಕೊರಿಂಥ 12:12). ಅಪೊಸ್ತಲರ ಮೂಲಕ ಬಲವನ್ನು ಹೊಂದಿದವರು ಇತರರ ಮೇಲೆ ತಮ್ಮ ಹಸ್ತಗಳನ್ನು ಇಡುವದರಿಂದ ಅದ್ಭುತಕರವಾದ ವರಗಳನ್ನು ದಾಟಿಸಲು ಶಕ್ತರಾದರೆಂಬುದಕ್ಕೆ ನಮಗೆ ಯಾವ ಪುರಾವೆಯೂ ಇರುವದಿಲ್ಲ.

ಅದ್ಭುತ ಕಾರ್ಯಗಳನ್ನು ಮಾಡಲು ಶಕ್ತನಾಗಿದ್ದ ಫಿಲಿಪ್ಪನ ಎದುರಿನಲ್ಲಿಯೂ (ಅಪೊಸ್ತಲರ ಕೃತ್ಯಗಳು 8:6), ಅಪೊಸ್ತಲರು ಪೇತ್ರ ಮತ್ತು ಯೋಹಾನರು - ಸಮಾರ್ಯದಲ್ಲಿ ಪರಿಶುದ್ಧಾತ್ಮನನ್ನು ಕೊಡಲು ಅವಶ್ಯವಾಗಿದ್ದರು (ಅಪೊಸ್ತಲರ ಕೃತ್ಯಗಳು 8:14-19) ಇತರರ ಮೇಲೆ ಅದ್ಭುತಕರವಾದ ಬಲವನ್ನು ಕೊಡುವದಕ್ಕಾಗಿ ದೇವರು ಅಪೊಸ್ತಲರಿಗೆ ವಿಶೇಷ ಸಾಮರ್ಥ್ಯವನ್ನು ಕೊಟ್ಟಿದ್ದನು.

ಸಮಾರ್ಯದಲ್ಲಿ ಪೇತ್ರ ಮತ್ತು ಯೋಹಾನನ ಕೆಲಸವನ್ನು ಕುರಿತು J. W. McGarvey ಹೀಗೆ ಬರೆದಿದ್ದಾರೆ,

> ಇಬ್ಬರು ಅಪೊಸ್ತಲರ ಸೇವೆಯನ್ನು ಯಾವುದೇ ಇತರ ಉದ್ದೇಶಗಳು ಪ್ರೇರೇಪಿಸಿದ್ದರೂ, ಶಿಷ್ಯರ ನಂಬಿಕೆಯನ್ನು ದೃಢಪಡಿಸುವಂಥದ್ದಾಗಿದ್ದರೂ ಇಲ್ಲವೇ ಫಿಲಿಪ್ಪನಿಗೆ ಅವನ ಸೇವೆಯಲ್ಲಿ ಸಹಾಯ ಮಾಡುವಂಥದ್ದಾಗಿದ್ದರೂ ಮುಖ್ಯ ಉದ್ದೇಶವು ಪರಿಶುದ್ಧಾತ್ಮನನ್ನು ಕೊಡುವದಾಗಿತ್ತು ಎಂಬುದು ನಿಶ್ಚಿತವಾದದ್ದಾಗಿದೆ. ಅವರು ತಲುಪಿದಾಗ, ತಾವು ಯಾವುದಕ್ಕಾಗಿ ಹೋದರೋ ಅದನ್ನೆ ಮಾಡಿದರು; ಆದರೆ ಅವರು ಮಾಡಿದ ಮುಖ್ಯ ಸಂಗತಿಯು ಪರಿಶುದ್ಧಾತ್ಮನನ್ನು ಅನುಗ್ರಹಿಸಿದ್ದು; ಆದದರಿಂದ ಇದು ಅವರ ಸಂದರ್ಶನದ ಮುಖ್ಯ ಉದ್ದೇಶವಾಗಿತ್ತು. ಒಂದು ವೇಳೆ ಫಿಲಿಪ್ಪನು ಈ ವರವನ್ನು ಅವರಿಗೆ ಕೊಟ್ಟಿದ್ದರೆ, ಅದರ ಮುಖ್ಯ ಉದ್ದೇಶವು ಸಂಬಂಧಿಸಿದಂತೆ ಅವರ ನಿಯೋಗವು ವ್ಯರ್ಥವಾಗಿ ಹೋಗುತ್ತಿತ್ತು. ಪರಿಶುದ್ಧಾತ್ಮನ ಅದ್ಭುತಕರವಾದ ವರವು ಯಾವುದೇ ಮಾನವ ಹಸ್ತಗಳಿಂದಲ್ಲ ಆದರೆ ಅಪೊಸ್ತಲರ ಹಸ್ತಗಳಿಂದ ಕೊಡಲ್ಪಟ್ಟಿತೆಂಬುದಕ್ಕೆ ಇದು ಬಲವಾದ ಪುರಾವೆಯನ್ನು ಕೊಡುತ್ತದೆ. ಈ ತೀರ್ಮಾನವು ಅಪೊಸ್ತಲರ

ಕೃತ್ಯಗಳಲ್ಲಿ ದಾಖಲೆಯಾದ ಇನ್ನೊಂದು ಉದಾಹರಣೆಯ ಯೋಚನೆಯಿಂದ, ಎಫೆಸದಲ್ಲಿಯ ಹನ್ನೆರಡು ಜನರ ಸಂಗತಿಯಿಂದ (ಎಫೆಸ 19:1-7), ಅಪೊಸ್ತಲರ ಹಸ್ತಗಳಿಂದ ವರವು ಕೊಡಲ್ಪಟ್ಟದ್ದನ್ನು ದೃಢಪಡಿಸುತ್ತದೆ.[1]

ಕೊರಿಂಥದಲ್ಲಿಯ ಸಭೆಯಲ್ಲಿ ಯಾವುದೇ ವರದ ಕೊರತೆಯಿರಲಿಲ್ಲ (1 ಕೊರಿಂಥ 1:7), ಆ ಸಂಗತಿಯು ಪೌಲನ ಒಬ್ಬ ಅಪೊಸ್ತಲನಾಗಿದ್ದನೆಂಬುದಕ್ಕೆ ರುಜುವಾತಾಗಿ ಉಪಯೋಗಿಸಲ್ಪಟ್ಟಿತು. "ನಾನು ಅಪೊಸ್ತಲರನಾಗಿದ್ದೇನೆಂಬುದಕ್ಕೆ ಕರ್ತನಿಗೆ ಸೇರಿದವರಾದ ನೀವೇ ಪ್ರಮಾಣವಾಗಿದ್ದೀರಷ್ಟೆ" (1 ಕೊರಿಂಥ 9:2) ಎಂದು ಪೌಲನು ಅವರಿಗೆ ಬರೆದನು. ಈ ವರಗಳು ನಂಬಿಕೆಯ ಮುಖಾಂತರ ಮಾತ್ರವೇ ಲಭ್ಯವಿದ್ದರೆ, ಇಲ್ಲವೇ ಅಪೊಸ್ತಲನ ಹಸ್ತಗಳನ್ನಿಡುವದನ್ನು ಬಿಟ್ಟು ಬೇರೆ ಯಾವುದೇ ಸಾಧನದಿಂದ ಲಭ್ಯವಿದ್ದರೆ, ಆಗ ಪೌಲನು ತನ್ನ ಅಪೊಸ್ತಲತ್ವಕ್ಕೆ ರುಜುವಾತಾಗಿ ಕೊರಿಂಥದಲ್ಲಿಯ ಸಭೆಯನ್ನು ತೋರಿಸುತ್ತಿರಲಿಲ್ಲ. ಕೊರಿಂಥಕ್ಕೆ ಬೇರೆ ಅಪೊಸ್ತಲರು ಹೋಗಿರದೆ ಇದ್ದಾಗ, ಪೌಲನು ಅಪೊಸ್ತಲನಾಗಿರಲೇ ಬೇಕು, ಯಾಕಂದರೆ ಅವನು - ಮಾತ್ರವೇ ಅದ್ಭುತಕರವಾದ ವರಗಳನ್ನು ಕೊಡಲು ಅಲ್ಲಿದ್ದನು. ಇದು ಸತ್ಯವಾಗಿದ್ದುದರಿಂದ, ಕೊರಿಂಥ ಸಭೆಯಲ್ಲಿಯ ವರಗಳು ಅವನ ಅಪೊಸ್ತಲತನಕ್ಕೆ ರುಜುವಾತಾಗಿದೆ.

ಅಪೊಸ್ತಲನು ಇಲ್ಲದೆ ಇರುವಲ್ಲಿ ಅದ್ಭುತಕರವಾದ ವರಗಳು ನೇರವಾಗಿ ದೇವರಿಂದ ಕೊಡಲ್ಪಟ್ಟಿದ್ದರೆ, ಅಲ್ಲಿಯ ಕ್ರೈಸ್ತರಿಗೆ ಆತ್ಮಿಕ ವರಗಳನ್ನು ಕೊಡಲು ಪೇತ್ರ ಮತ್ತು ಯೋಹಾನರು ಸಮಾರ್ಯಕ್ಕೆ ಹೋಗುವ ಅಗತ್ಯತೆ ಇರಲಿಲ್ಲ ಮತ್ತು ಪೌಲನು ರೋಮ್‌ಗೆ ಹೋಗುವ ಅವಶ್ಯಕತೆ ಇರಲಿಲ್ಲ (ರೋಮಾಪುರ 1:11). ಈ ರೀತಿಯಲ್ಲಿ ದೇವರು ಕಾರ್ಯಮಾಡಿದ್ದರೆ ಅಪೊಸ್ತಲನು ಅಲ್ಲಿರದೇ ಇದು ಮಾಡಲ್ಪಡಬಹುದಿತ್ತು. ಇದಕ್ಕೆ ವ್ಯತಿರಿಕ್ತವಾದ ಒಂದೇ ಉದಾಹರಣೆಯು ಕೊರ್ನೇಲ್ಯನ ಮನೆತನದವರು.[2]

ಆ ಸಮಯದಿಂದ (ಅಪೊಸ್ತಲರ ದಿನಗಳಿಂದ), ಅದ್ಭುತ ಕಾರ್ಯಗಳು, ಮಹತ್ಕಾರ್ಯಗಳು, ಸೂಚಕ ಕಾರ್ಯಗಳು ನಿಂತು ಹೋಗಿವೆ. ಅಂಥ ವರಗಳನ್ನು ಕೊಡಲು ಇಂದು ಅಪೊಸ್ತಲರು ಇರುವದಿಲ್ಲ. ಇಂದು ಅದ್ಭುತಕಾರ್ಯಗಳನ್ನು ಮಾಡುವವರು ಎಂದು ಹೇಳಿಕೊಳ್ಳುವವರು ನೀರಿನ ಮೇಲೆ ನಡೆದರೆ, ಘರ್ಜಿಸುವ ಸಮುದ್ರವನ್ನು ಶಾಂತಪಡಿಸಿದರೆ, ಸತ್ತವರನ್ನು ಎಬ್ಬಿಸಿದರೆ, ಜನಸಮೂಹಗಳಿಗೆ ಉಣಬಡಿಸಲು ಆಹಾರವನ್ನು ವೃದ್ಧಿಗೊಳಿಸಿದರೆ, ಇಲ್ಲವೇ ಇತರ ಸ್ಪಷ್ಟವಾದ ಅದ್ಭುತಕಾರ್ಯಗಳನ್ನು ಮಾಡಿದರೆ, ಅವರು ಈ ಸಾಮರ್ಥ್ಯಗಳನ್ನು ಪುನಃ ಪುನಃ ಪ್ರದರ್ಶಿಸುವರು. ಹೊಸ ಒಡಂಬಡಿಕೆಯಲ್ಲಿ ವಿವರಿಸಿದಂಥ ಅಧ್ಭುತ ಕಾರ್ಯಗಳನ್ನು ಮಾಡಲು ಅವರು ಅಶಕ್ತರಾಗಿರುವರು.

## ವಿಶಿಷ್ಟವಾದ ವಿಶ್ವಾಸಿಗಳಿಂದ ಅದ್ಭುತಕಾರ್ಯಗಳು ಮಾಡಲ್ಪಟ್ಟವು

"... ನಂಬುವವರಿಂದ ಈ ಸೂಚಕ ಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸ ಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಇವರಿಗೆ ಗುಣವಾಗುವದು" ಎಂದು ಯೇಸು ಮಾರ್ಕ 16:17, 18ರಲ್ಲಿ ಹೇಳಿರುವನು. ಈ ವಾಕ್ಯಭಾಗವು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡುವದಿಲ್ಲ: (1) ಎಲ್ಲಾ ವಿಶ್ವಾಸಿಗಳು ದೆವ್ವಗಳನ್ನು

ಬಿಡಿಸಲು, ಹೊಸ ಭಾಷೆಗಳಿಂದ ಮಾತಾಡಲು, ಯಾವ ಕೇಡೂ ಹೊಂದದೆ ಹಾವುಗಳನ್ನು ಎತ್ತುವರೋ ಇಲ್ಲವೇ ವಿಷವನ್ನು ಕುಡಿಯುವರೋ ಮತ್ತು ರೋಗಿಗಳನ್ನು ವಾಸಿ ಮಾಡುವರೋ? (2) ಕೆಲವೊಂದು ವಿಶ್ವಾಸಿಗಳಿಗೆ ಈ ವರಗಳು ಮಿತಿಗೊಂಡಿರುವವ್ವೋ? (3) ಯಾವ ತಳಹದಿಯ ಮೇಲೆ ಈ ಕಾರ್ಯಗಳನ್ನು ಮಾಡುವವರು ಅವುಗಳನ್ನು ಮಾಡಲು ಶಕ್ತರಾಗುವರು? (4) ಈ ಸೂಚಕ ಕಾರ್ಯಗಳು ಎಲ್ಲಿಯ ವರೆಗೆ ಮುಂದುವರಿಯುವವು? (5) ಈ ಸೂಚಕ ಕಾರ್ಯಗಳ ಉದ್ದೇಶವು ಯಾವುದು?

ಪೌಲನಿಂದ ಒಂದು ಹೇಳಿಕೆಯು ಎಲ್ಲಾ ವಿಶ್ವಾಸಿಗಳು ವರಗಳನ್ನು ಹೊಂದಿಕೊಂಡಿರಲಿಲ್ಲವೆಂಬುದಕ್ಕೆ ಪುರಾವೆಯನ್ನು ಒದಗಿಸುತ್ತದೆ (1 ಕೊರಿಂಥ 12:7-11, 27-31). ಅಲಂಕಾರಿಕವಾಗಿ ಅವನು ಹೀಗೆ ಪ್ರಶ್ನಿಸಿದನು: "ಎಲ್ಲರೂ ಅಪೊಸ್ತಲರೋ? ಎಲ್ಲರೂ ಪ್ರವಾದಿಗಳೋ? ಎಲ್ಲರೂ ಉಪದೇಶಕರೋ? ಎಲ್ಲರೂ ಮಹತ್ಕಾರ್ಯಗಳನ್ನು ಮಾಡುವವರೋ? ರೋಗ ವಾಸಿ ಮಾಡುವ ವರಗಳು ಎಲ್ಲರಿಗೂ ಉಂಟೋ? ಎಲ್ಲರೂ ವಾಣಿಗಳನ್ನಾಡುವರೋ? ವಾಣಿಗಳ ಅರ್ಥವನ್ನು ಹೇಳುವದಕ್ಕೆ ಎಲ್ಲರಿಗೂ ಶಕ್ತಿಯುಂಟೋ?" ಕೇವಲ ನಿಶ್ಚಿತ ವಿಶ್ವಾಸಿಗಳಿಗೆ ಅದ್ಭುತಕರವಾದ ವರಗಳಿದ್ದವು, ಹಾಗೂ ಪ್ರತಿಯೊಬ್ಬನಿಗೆ ತನ್ನ ಸ್ವಂತ ನಿಶ್ಚಿತವಾದ ವರವಿತ್ತು.

ಅದ್ಭುತಕರವಾದ ವರಗಳಿದ್ದವರು ಅವರು ವಿಶ್ವಾಸಿಗಳಾಗಿದ್ದುದರಿಂದ ಅವರಿಗಾಗಿಯೇ ಇರಲಿಲ್ಲ, ಆದರೆ ಅವರು ಪರಿಶುದ್ಧಾತ್ಮನಿಂದ ಬಲಗೊಳಿಸಲ್ಪಟ್ಟದ್ದರಿಂದ ಅವರದಾಗಿದ್ದವು (1 ಕೊರಿಂಥ 12:11). ಅವರ ಅದ್ಭುತಕರವಾದ ಬಲಗಳು ಅಪೊಸ್ತಲರು ತಮ್ಮ ಹಸ್ತಗಳನ್ನು ಇಡುವವರ ಮುಖಾಂತರ ಪರಿಶುದ್ಧಾತ್ಮನು ಅವರಿಗೆ ಕೊಡಲ್ಪಡುವ ಪರಿಣಾಮವಾದ ಶಕ್ತಿಗಳಾಗಿದ್ದವು (ಅಪೊಸ್ತಲರ ಕೃತ್ಯಗಳು 8:14-17; 19:6). ಈ ಕಾರಣದಿಂದ, ಅಪೊಸ್ತಲರು ಹಾಜರಿದ್ದಾಗ ಮಾತ್ರವೇ ಅದ್ಭುತಕರವಾದ ವರಗಳು ಕೊಡಲ್ಪಟ್ಟವು (ರೋಮಾಪುರ 1:11 ಗಮನಿಸಿರಿ), ಅಪೊಸ್ತಲರ ಮತ್ತು ಪ್ರವಾದಿಗಳ ಮೇಲೆ ಸಭೆಯ ಅಸ್ತಿವಾರವು ಹಾಕಲ್ಪಡುತ್ತಿರುವಂತೆ (ಎಫೆಸ 2:20) ಅವು ಸುವಾರ್ತೆಯ ಸತ್ಯಗಳನ್ನು ದೃಢಪಡಿಸುವ ಉದ್ದೇಶಕ್ಕಾಗಿ ಇದ್ದವು (ಮಾರ್ಕ 16:20; ಅಪೊಸ್ತಲರ ಕೃತ್ಯಗಳು 14:3; ಇಬ್ರಿಯ 2:3, 4).

ಮಾರ್ಕ 16:17, 18ರನ್ನು ಕುರಿತು McGarvey ಸರಿಯಾಗಿ ಹೇಳಿದ್ದಾರೆ:

> ವಾಗ್ದಾನವು ಈ ಸೂಚಕ ಕಾರ್ಯಗಳು ಯಾವುದೇ ನಿರ್ದಿಷ್ಟ ಸಮಯಕ್ಕೆ ಮುಂದರಿಯುವವು ಎಂದಾಗಿಲ್ಲ, ಇಲ್ಲವೇ ಪ್ರತಿಯೊಬ್ಬ ವೈಯಕ್ತಿಕ ವಿಶ್ವಾಸಿಯನ್ನು ಹಿಂಬಾಲಿಸ ಬೇಕೆಂದಿಲ್ಲ; ಆದರೆ ಅವು ಕೇವಲ ಹಿಂಬಾಲಿಸುವವು, ಮತ್ತು "ವಿಶ್ವಾಸಿಗಳನ್ನು" ಒಂದು ದೇಹದಂತೆ ತೆಗೆದುಕೊಂಡು ಅನುಸರಿಸುವವು. ಅಪೊಸ್ತಲಿಕ ಯುಗದಲ್ಲಿ ಅವು ವಿಶ್ವಾಸಿಗಳನ್ನು ಹಿಂಬಾಲಿಸಿದವು - ಪ್ರತಿಯೊಬ್ಬ ವಿಶ್ವಾಸಿಯನ್ನಲ್ಲ, ಆ ಎಲ್ಲರನ್ನು ಹೆಚ್ಚಾಗಿ ಎಲ್ಲರನ್ನು, ವಿಶ್ವಾಸಿಗಳ ಸಂಘಟಿತ ಸಭೆಗಳನ್ನು. ಇದು ವಾಗ್ದಾನ ಮಾಡಲ್ಪಟ್ಟದ್ದರ ಸಂಪೂರ್ಣ ನೆರವೇರಿಕೆಯಾಗಿದೆ.[3]

## ಯೇಸುವಿನ ಹೆಸರಿನಲ್ಲಿ ಅದ್ಭುತ ಕಾರ್ಯಗಳು ಮಾಡಲ್ಪಟ್ಟವು

ಯೇಸುವು ಕ್ರೂಜಿಸಲ್ಪಡುವ ಹಿಂದಿನ ರಾತ್ರಿಯಲ್ಲಿ, ಅಪೊಸ್ತಲರಿಗೆ, "ನೀವು ನನ್ನ ಹೆಸರಿನಲ್ಲಿ ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು" (ಯೋಹಾನ 14:14) ಎಂದು ಹೇಳಿದನು. ಯೇಸುವಿನ ಹೆಸರಿನಲ್ಲಿ ಬೇಡಿಕೊಂಡರೆ, ಅದ್ಭುತ

ಕಾರ್ಯವಾಗುವುದೆಂದು ಕೆಲವರು ತೀರ್ಮಾನಿಸಿಕೊಂಡಿದ್ದಾರೆ. ಹಾಗಿದ್ದರೂ, ಇದು ಆ ಸಮಯದಲ್ಲಿ ಯೇಸುವಿನೊಂದಿಗೆ ಇದ್ದ ಅಪೊಸ್ತಲರಿಗೆ ಮಾತ್ರವೇ ಹೇಳಲ್ಪಟ್ಟಿರುತ್ತದೆ (ಮತ್ತಾಯ 26:20; ಲೂಕ 22:14). ಅಪೊಸ್ತಲರ ಕೃತ್ಯಗಳ ಗ್ರಂಥ ಯೇಸುವಿನ ಹೆಸರಿನಲ್ಲಿ ಯಾರೋ ಒಬ್ಬನಿಂದ ದೆವ್ವವು ಹೊರಗೆ ಬರಬೇಕೆಂದು ಕೇಳಿದ್ದನ್ನು ಹೇಳುತ್ತದೆ. "ಯೇಸುವಿನ ಗುರುತು ನನಗುಂಟು, ಪೌಲನನ್ನೂ ಬಲ್ಲೆನು; ನೀವಾ ದರೋ ಯಾರು?" (ಅಪೊಸ್ತಲರ ಕೃತ್ಯಗಳು 19:13-15) ಎಂದು ದೆವ್ವವು ಉತ್ತರ ಕೊಟ್ಟಿತು. ಯೇಸುವು ಪೌಲನಿಗೆ ಬಲವನ್ನು ಕೊಟ್ಟಿದ್ದನು, ಆದರೆ ಸ್ಕೇವನ ಮಕ್ಕಳಿಗೆ ಕೊಟ್ಟಿರಲಿಲ್ಲ. ದೆವ್ವಗಳು ಇದನ್ನು ಅರ್ಥಮಾಡಿಕೊಂಡು, ತಮಗೆ ಆಜ್ಞಾಪಿಸಲು ಅಧಿಕಾರ ಕೊಡಲ್ಪಡದವರಿಗೆ ವಿಧೇಯರಾಗಲಿಲ್ಲ.

"ಸ್ವಾಮೀ, ಸ್ವಾಮೀ, ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಿಲಿಲ್ಲವೇ, ನಿನ್ನ ಹೆಸರಿನಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ?" (ಮತ್ತಾಯ 7:22) ಎಂದು ಹೇಳಲು ಧರ್ಮಹೀನರನ್ನು ತಾನು ತಿಳಿದಿಲ್ಲವೆಂದು ಯೇಸು ಹೇಳಿದನು.

ಅದ್ಭುತಕಾರ್ಯಗಳನ್ನು ಮಾಡುವ ಬಲವು ಮೊದಲು ಕೊಡಲ್ಪಡಬೇಕು; ಆಮೇಲೆ ವಿಶ್ವಾಸದ ಮುಖಾಂತರ ಯೇಸುವಿನ ಹೆಸರಿನಲ್ಲಿ ಬೇಡಿಕೊಳ್ಳುವದರಿಂದ ಅದ್ಭುತಕಾರ್ಯವು ನಡಿಸಲ್ಪಡುವುದು, ಇದರ ಒಂದು ಉದಾಹರಣೆಯು ಅಪೊಸ್ತಲರ ಕೃತ್ಯಗಳು 3:1-16ರಲ್ಲಿ ಕೊಡಲ್ಪಟ್ಟಿದೆ. ಪರಿಶುದ್ಧಾತ್ಮನು ಬಂದಾಗ ಬಲವನ್ನು ಹೊಂದಿದ ಪೇತ್ರ ಮತ್ತು ಯೋಹಾನರು (ಅಪೊಸ್ತಲರ ಕೃತ್ಯಗಳು 1:8; 2:4), ಯೇಸುವಿನ ಹೆಸರಿನಲ್ಲಿ (ವಚನ 6) ಮತ್ತು ಆತನ ಹೆಸರಿನಲ್ಲಿ ತಮ್ಮ ನಂಬಿಕೆಯ ಮುಖಾಂತರ (ವಚನ 16) ಹುಟ್ಟುಕುಂಟನನ್ನು ಗುಣಪಡಿಸಿದರು. ಕೇವಲ ವಿಶ್ವಾಸದ ಮೇಲೆ ಇಲ್ಲವೇ ಕೇವಲ ಯೇಸುವಿನ ಹೆಸರಿನಲ್ಲಿ ಬೇಡಿಕೊಳ್ಳುವದರ ಮೇಲೆ ಅವಲಂಭಿಸಿ ಅದ್ಭುತ ಕಾರ್ಯಗಳು ಮಾಡಲ್ಪಡಲಿಲ್ಲ. ಬಲವು ಕೊಡಲ್ಪಡ ಬೇಕಾಗಿತ್ತು; ಆಗ ಯೇಸುವಿನ ಹೆಸರಿನಲ್ಲಿ ನಂಬಿಕೆಯಿಂದ ಅದ್ಭುತಕಾರ್ಯವು ಮಾಡಲ್ಪಡುತ್ತಿತ್ತು.

## ಅದ್ಭುತ ಕಾರ್ಯಗಳು ಹಣಕ್ಕಾಗಿ ಮಾಡಲ್ಪಡಲಿಲ್ಲ

"ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲ" (ಅಪೊಸ್ತಲರ ಕೃತ್ಯಗಳು 3:6ಎ) ಎಂದು ಪೇತ್ರನು ಹುಟ್ಟುಕುಂಟನಿಗೆ ಹೇಳಿದನು. "ರೋಗಿಗಳನ್ನು ಸ್ವಸ್ಥಮಾಡಿರಿ; ಸತ್ತವರನ್ನು ಬದುಕಿಸಿರಿ, ಕುಷ್ಠ ಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತ ವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ" (ಮತ್ತಾಯ 10:8) ಎಂದು ಯೇಸು ತನ್ನ ಅಪೊಸ್ತಲರಿಗೆ ನಿರ್ದೇಶಿಸಿದ್ದನು. "ಅನೇಕಸಾರಿ ನಿದ್ದೆಗೆಟ್ಟು ಹಸಿವೆ ಬಾಯಾರಿಕೆ ಗಳನ್ನು ಪಟ್ಟು ಅನೇಕಸಾರಿ ಉಪವಾಸವಾಗಿಯೂ ಚಳಿಯಲ್ಲಿಯೂ" ಪ್ರಯಾಸ ಪಟ್ಟು ದುಡಿದೆನೆಂದು ಪೌಲನು ಬರೆದಿದ್ದಾನೆ (2 ಕೊರಿಂಥ 11:27). "ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯ ಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ" ಎಂದು ಯೇಸು ಹೇಳಿದನು (ಲೂಕ 9:58).

ಅದ್ಭುತ ಮಾಡುವ ಬಲವನ್ನು ಹೊಂದಿಕೊಂಡಿದ್ದವರು ಹಣಕಾಸಿನ ಲಾಭ ಗಳನ್ನು ಪಡೆಯುವದಕ್ಕಾಗಿ ಉಪಯೋಗಿಸಲಿಲ್ಲ. ಉಚಿತವಾಗಿ ಹೊಂದಿದ್ದೀರಿ, ಉಚಿತ ವಾಗಿ ಕೊಡಿರಿ ಎಂದು ಯೇಸು ಹೇಳಿದನು. ಇಂದು ಅದ್ಭುತಗಳನ್ನು ಮಾಡು ತ್ತೇವೆಂದು ಹೇಳಿಕೊಳ್ಳುವವರು ವಿಫುಲವಾಗಿ ಹಣವನ್ನು ಸ್ವೀಕರಿಸುತ್ತಾರೆ ಮತ್ತು

ಆ ಹಣವನ್ನು ಯಾರಿಂದ ಹೊಂದಿಕೊಂಡರೋ ಅಂಥ ಬಡವರಿಗಿಂತ ಎಷ್ಟೋ ಹೆಚ್ಚಾಗಿ ಸುಖಭೋಗದಲ್ಲಿರುತ್ತಾರೆ. ಇದರಲ್ಲಿ ಅವರು ಯೇಸುವಿನ ಮಾದರಿಯನ್ನು ಅನುಸರಿಸುತ್ತಿರುವದಿಲ್ಲ. ತಾವು ಮಾಡಿದ ಅದ್ಭುತ ಕಾರ್ಯಗಳಿಂದ ಬಹಳವಾಗಿ ಹಣಕಾಸಿನ ಲಾಭಪಡೆಯದೇ ಇದ್ದ ಯೇಸು, ಪೌಲ, ಪೇತ್ರ ಮತ್ತು ಇತರ ಆದಿ ಕ್ರೈಸ್ತರ ವಿಧಾನವನ್ನು ಅನುಸರಿಸುತ್ತಿರುವದಿಲ್ಲ.

## ಅದ್ಭುತಕಾರ್ಯಗಳು "ಎಲ್ಲಾ ವಾಸಿಮಾಡುವಿಕೆ" ಯಾಗಿರುವದಿಲ್ಲ

ಯೇಸುವು ವೈದ್ಯರಲ್ಲಿ ನಂಬಿಕೆಯಿಟ್ಟಿದ್ದನು, ಅಂದರೆ ಔಷಧಗಳ ಉಪಯೋಗ ವನ್ನು ಆತನು ಒಪ್ಪಿಕೊಂಡನೆಂದು ಅರ್ಥವಾಗುತ್ತದೆ. "ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ, ಕ್ಷೇಮವಿಲ್ಲದವರಿಗೆ ವೈದ್ಯನು ಬೇಕು" ಎಂದು ಆತನು ಹೇಳಿದನು (ಮತ್ತಾಯ 9:12; ಮಾರ್ಕ 2:17; ಲೂಕ 5:31) ಲೂಕನು ವೈದ್ಯನಾಗಿದ್ದನು. ಪೌಲನು ಅವನನ್ನು ಕುರಿತು ಹೇಳಿದಾಗ, ಅವನು ವೈದ್ಯನಾಗಿದ್ದನು ಎಂದು ಹೇಳಲಿಲ್ಲ, ಆದರೆ "ಪ್ರಿಯ ವೈದ್ಯನಾಗಿರುವ ಲೂಕನು" (ಕೊಲೊಸ್ಸೆ 4:14) ಎಂದು ಬರೆದನು. ಅವನು ಕ್ರೈಸ್ತನಾದ ಮೇಲೆಯೂ ವೈದ್ಯನಾಗಿ ಮುಂದುವರೆದನೆಂದು ಇದು ಸೂಚಿಸುತ್ತದೆ.

ಪೌಲನು ತಿಮೊಥೆಯನಿಗೆ ಬರೆದಾಗ ಔಷಧದ ಉಪಯೋಗವನ್ನು ಅವನಿಗೆ ಶಿಫಾರಸು ಮಾಡಿದನು, "ಇನ್ನು ಮೇಲೆ ನೀರನ್ನು ಮಾತ್ರ ಕುಡಿಯುವವನಾಗಿರದೆ ನಿನ್ನ ಅಜೀರ್ಣದ ಮತ್ತು ನಿನಗೆ ಆಗಾಗ್ಗೆ ಉಂಟಾಗುವ ಅಸ್ವಸ್ಥತೆಯ ಪರಿಹಾರಕ್ಕಾಗಿ ದ್ರಾಕ್ಷಾರಸವನ್ನು ಸ್ವಲ್ಪವಾಗಿ ತೆಗೆದುಕೋ" (1 ತಿಮೊಥೆ 5:23). ಮದ್ಯಪಾನವನ್ನಾಗಿ ದ್ರಾಕ್ಷಾರಸವನ್ನು ತೆಗೆದುಕೊಳ್ಳಬೇಕೆಂದು ಪೌಲನು ಶಿಫಾರಸು ಮಾಡುತ್ತಿರುವದಿಲ್ಲ, ಆದರೆ ತಿಮೊಥೆಯನ ಅಜೀರ್ಣ ಹಾಗೂ ಇತರ ಅಸ್ವಸ್ಥತೆಯ ಪರಿಹಾರಕ್ಕಾಗಿ ತೆಗೆದು ಕೊಳ್ಳಬೇಕೆಂದು ಹೇಳಿದ್ದಾನೆ.

ಸ್ವಸ್ಥಪಡಿಸುವಿಕೆಯು ಕೇವಲ ರೋಗಿಗಳ ಲಾಭಕ್ಕಾಗಿದೆ ಎಂದು ತೋರಿಸು ವದಕ್ಕಾಗಿ ಪೌಲನು ತನ್ನ ಜೊತೆಯವರನ್ನು ಗುಣಪಡಿಸಲಿಲ್ಲ, ಆದರೇ ಅವನಿಗೆ ಇನ್ನೊಂದು ಉದ್ದೇಶವಿತ್ತು "ತ್ರೊಫಿಯನು ಅಸೌಖ್ಯವಾಗಿದ್ದದರಿಂದ ಅವನನ್ನು ಮಿಲೇತ ದಲ್ಲಿ ಬಿಟ್ಟೆನು" (2 ತಿಮೊಥೆ 4:20ಬಿ) ಎಂದು ಪೌಲನು ಬರೆದನು. "ಶರೀರದಲ್ಲಿ ನಾಟಲ್ಪಟ್ಟ ಶೂಲ"ದಿಂದ ಪೌಲನು ಗುಣಹೊಂದಲಿಲ್ಲ (2 ಕೊರಿಂಥ 12:7, 8).

ಮೇಲಿನ ಹೇಳಿಕೆಗಳಿಂದ ಈ ಕೆಳಗಿನ ಅಭಿಪ್ರಾಯಗಳನ್ನು ಹೇಳಬಹುದು: (1) ರೋಗಿಗಳು ವೈದ್ಯರನ್ನು ಉಪಯೋಗಿಸಿಕೊಳ್ಳಬೇಕು. (2) ಪೌಲನಿಗೆ ಅಪೊಸ್ತಲನ ಬಲವಿದ್ದರೂ ಜನರನ್ನು ಗುಣಪಡಿಸಿದ್ದರೂ (ಅಪೊಸ್ತಲರ ಕೃತ್ಯಗಳು 14:9, 10; 19:11, 12), ಅವನು ತಿಮೊಥೆಯನ್ನು ಇಲ್ಲವೇ ತ್ರೊಫಿಮನನ್ನು ಗುಣಪಡಿಸಲಿಲ್ಲ. (3) ನಮ್ಮ ರೋಗಗಳನ್ನು ಗುಣಪಡಿಸಿಕೊಳ್ಳಲು ಇಂದು ನಮಗೆ ಸಹಾಯವಾ ಗುವಂತೆ ತಿಮೊಥೆಯನಿಗೆ ಔಷಧದ ಉಪಯೋಗವು ಶಿಫಾರಸು ಮಾಡಲ್ಪಟ್ಟಿತು. (4) ತಿಮೊಥೆಯನನ್ನು ಮತ್ತು ತ್ರೊಫಿಮನನ್ನು ಗುಣಪಡಿಸಲು ಪೌಲನ ವಿಶ್ವಾಸವು ಸಾಕಷ್ಟು ಬಲವಾಗಿರಲಿಲ್ಲ, ಅವರಿಗೆ ಸ್ವಸ್ಥವಾಗಲು ಸಾಕಷ್ಟು ಬಲವಾಗಿರಲಿಲ್ಲ, ಅವರಿಗೆ ಸ್ವಸ್ಥವಾ ಗಲು ಸಾಕಷ್ಟು ವಿಶ್ವಾಸವಿರಲಿಲ್ಲ ಇಲ್ಲವೇ ಗುಣಪಡಿಸುವಿಕೆಯು ಎಲ್ಲಾ ರೋಗಿ ಜನರ ಲಾಭಕ್ಕಾಗಿರಲಿಲ್ಲ. ಪೌಲನ ವಿಶ್ವಾಸದ ಬಗ್ಗೆ ನಾವು ಸಂಶಯ ಪಡಬಾರದು ಇಲ್ಲವೇ ತಿಮೊಥೆಯ ವಿಶ್ವಾಸವನ್ನು (2 ತಿಮೊಥೆ 1:5) ಇಲ್ಲವೇ ತ್ರೊಫಿಮನ ವಿಶ್ವಾಸವನ್ನು ಕುರಿತು ಪ್ರಶ್ನಿಸಬಾರದು. (5) ತಿಮೊಥೆಯನಿಗೆ ತನ್ನನ್ನು ಗುಣಪಡಿಸಿ

ಕೊಳ್ಳಲು  ಪೌಲನು ನಂಬಿಕೆಯನ್ನು ಮತ್ತು ಪ್ರಾರ್ಥನೆಯನ್ನು ಶಿಫಾರಸು ಮಾಡಲಿಲ್ಲ, ಆದರೆ ಔಷಧವನ್ನು ಪರಿಹಾರವಾಗಿ ಹೇಳಿದನು. ನಂಬಿಕೆ ಮಾತ್ರವೇ ಗುಣಪಡಿಸಬಹುದಾದರೆ, ಪೌಲನು ತಿಮೊಥೆಯನಿಗೆ ತಪ್ಪಾದ ಬುದ್ಧಿವಾದವನ್ನು ಕೊಡುವವನಾಗುತ್ತಿದ್ದನು. (6) ತಿಮೊಥೆಯನನ್ನು ಮತ್ತು ತ್ರೊಫಿಮನನ್ನು ಪೌಲನು ಗುಣಪಡಿಸ ಬಹುದಾಗಿದ್ದರೂ ಗುಣಪಡಿಸಿರದಿದ್ದರೆ, ಅವನು ಅವರಿಗೆ ದೊಡ್ಡ ಅನ್ಯಾಯ ಮಾಡುವವನಾಗಿದ್ದನು.

(7) ಗುಣಪಡಿಸುವಿಕೆಯು ಅವಿಶ್ವಾಸಿಗಳನ್ನು ಆಕರ್ಷಿಸುವದಕ್ಕಾಗಿ ಇಲ್ಲವೇ ಸಂದೇಶವು ದೇವರಿಂದ ಬಂದದ್ದು ಎಂಬುದನ್ನು ದೃಢಪಡಿಸುವದಕ್ಕಾಗಿ ಅವಶ್ಯವಾದದ್ದಾದಾಗ ಮಾತ್ರವೇ ಅದು ಮಾಡಲ್ಪಡತಕ್ಕದ್ದು. (8) ತಿಮೊಥೆ ಮತ್ತು ತ್ರೊಫಿಮರ ಪೌಲನ ಬೋಧನೆಯು ದೇವರಿಂದ ಬಂದದ್ದೆಂದು ತಿಳಿದಿದ್ದರು, ಆದುದರಿಂದ ಆ ಸಂಗತಿಗೆ ರುಜುವಾತು ಬೇಕಾಗಿರಲಿಲ್ಲ. (9) ಲಿಖಿತ ವಾಕ್ಯವು ನಮಗೆ ಅಗತ್ಯವಾದ ಪುರಾವೆಯನ್ನು ಕೊಡುವುದು (ಯೋಹಾನ 20:30, 31), ಆದದರಿಂದ ದೇವರು ನಮಗೆ ಇನ್ನೊಂದು ಪುರಾವೆಯನ್ನು ಕೊಡುವದಿಲ್ಲ. ಉದಾಹರಣೆಯಾಗಿ, ಲೂಕ 16:29-31ರಲ್ಲಿಯ ಐಶ್ವರ್ಯವಂತ ಮನುಷ್ಯನಿಗೆ ಮೋಶೆ ಮತ್ತು ಪ್ರವಾದಿಗಳನ್ನು ದಾಟಿ ಬೇರೆ ಯಾವ ಪುರಾವೆ ಕೊಡಲ್ಪಡಲಿಲ್ಲ. (10) ಮತ್ತು ಅಸ್ವಸ್ಥರಾಗಿರುವಾಗ ಇಂದು ನಮ್ಮನ್ನು ಸುಧಾರಿಸಿಕೊಳ್ಳಲು ಲಭ್ಯವಿರುವ ಸಾಧನಗಳನ್ನು ಉಪಯೋಗಿಸಿಕೊಳ್ಳತ್ತಕ್ಕದ್ದು. ನಾವು ಅದ್ಭುತಕಾರ್ಯಗಳಿಗಾಗಿ ಅಲ್ಲ, ಆದರೆ ಸಹಾಯಕ್ಕಾಗಿ ಪ್ರಾರ್ಥಿಸತಕ್ಕದ್ದು.

## ಮುಕ್ತಾಯ

ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳು ಪರಿಶುದ್ಧಾತ್ಮನ ಕಾರ್ಯದ ಮುಖಾಂತರ ನಡೆಯುವಂಥವುಗಳು ಅವುಗಳನ್ನು ನೋಡಿದವರಿಗೆ ದೇವರು ದೇವರಾಗಿದ್ದಾನೆ ಮತ್ತು ಆತನು ತನ್ನ ವಾಕ್ಯದ ಮುಖಾಂತರ ತನ್ನನ್ನು ಪ್ರಕಟಿಸಿ ಕೊಂಡಿದ್ದಾನೆ ಎಂಬುದನ್ನು ಸಿದ್ಧಪಡಿಸಿ ತೋರಿಸುವಲ್ಲಿ ಮಹತ್ವವುಳ್ಳವುಗಳಾಗಿದ್ದವು. ಇಂದು ಪರಿಶುದ್ಧಾತ್ಮನು ಕ್ರೈಸ್ತರಲ್ಲಿ ನೇರವಾಗಿ ಕಾರ್ಯಮಾಡಲು ಇಲ್ಲವೇ ಅದ್ಭುತಕರವಾದ ರೀತಿಯಲ್ಲಿ ಅವರಲ್ಲಿ ಇರುವದಿಲ್ಲ. ಅಪೊಸ್ತಲರ ಹಸ್ತಗಳನ್ನಿಡುವದರ ಮುಖಾಂತರ ಪರಿಶುದ್ಧಾತ್ಮನ ವರವನ್ನು ಹೊಂದಿದ ಕೊನೆಯ ವ್ಯಕ್ತಿಯು ಮರಣದಲ್ಲಿ ಈ ಕಾರ್ಯವು ನಿಂತು ಹೋಯಿತು.

ಬೋಧಕರು ಅವನ ಬೋಧನೆಯಿಂದ ತಯಾರಿಸಲ್ಪಡಬೇಕು ಆದರೆ ಅವರಿಂದಾಗುವ ಅದ್ಭುತಕಾರ್ಯಗಳಿಂದಲ್ಲ. ನಾವು ಆತ್ಮಗಳನ್ನು ಪರೀಕ್ಷಿಸಬೇಕು (1 ಯೋಹನ 4:1), ಅವರು ಮಾಡುವೆವು ಎಂದು ಹೇಳುವ ಸೂಚಕ ಕಾರ್ಯಗಳಿಂದ ಮತ್ತು ಅದ್ಭುತಕಾರ್ಯಗಳಿಂದ ಅಲ್ಲ. ಆದರೆ ಅವರ ಬೋಧನೆಯಿಂದ. ಮೌಲ್ಯಮಾಪನಕ್ಕಾಗಿ ದೇವರು ನಮಗೆ ಒಂದು ಮಟ್ಟವನ್ನು ಕೊಟ್ಟಿದ್ದಾನೆ: "ಅವರು ಲೋಕದಿಂದ ಹುಟ್ಟಿದವರಾಗಿದ್ದಾರೆ; ಈ ಕಾರಣದಿಂದ ಅವರು ಲೋಕ ಪ್ರೇರಿತರಾಗಿ ಮಾತಾಡುತ್ತಾರೆ; ಮತ್ತು ಲೋಕದವರು ಅವರ ಮಾತನ್ನು ಕೇಳುತ್ತಾರೆ, ನಾವಂತೂ ದೇವರಿಂದ ಹುಟ್ಟಿದವರಾಗಿದ್ದೇವೆ; ದೇವರನ್ನು ಬಲ್ಲವನು ನಮ್ಮ ಮಾತನ್ನು ಕೇಳುತ್ತಾನೆ: ಇದು ಸತ್ಯವನ್ನು ಬೋಧಿಸುವ ಆತ್ಮ, ಅದು ಸುಳ್ಳನ್ನು ಬೋಧಿಸುವ ಆತ್ಮ ಎಂದು ಇದರಿಂದಲೇ ತಿಳುಕೊಳ್ಳುತ್ತೇವೆ" (1 ಯೋಹಾನ 4:5, 6).

**ಟಿಪ್ಪಣಿಗಳು**

[1]J. W. McGarvey, *New Commentary on Acts of Apostles*, vol. 1 (N.p., 1892; reprint, Delight, Ark.: Gospel Light Publishing Co., n.d.), 142. [2]ಕೊರ್ನೇಲ್ಯ ಮತ್ತು ಅವನ ಮನೆಯವರನ್ನು ಕುರಿತ ಚರ್ಚೆಯನ್ನು "ಪರಿಶುದ್ಧಾತ್ಮನ ಬಾಪ್ತಿಸ್ಮ" ಎಂಬ ಪಾಠದಲ್ಲಿ ನೋಡಿರಿ. [3]J. W. McGarvey, *Matthew and Mark*, The New Testament Commentary, vol. 1 (N.p., 1875; reprint, Delight, Ark.: Gospel Light Publishing Co., n.d.), 375.

© 2009 Truth for Today